ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಬಹುಶಃ ಆ ಕೆಲಸವನ್ನು ಶೀಘ್ರದಲ್ಲೇ ಮಾಡುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಆದರೆ ಅದನ್ನು ಗಮನಸೆಳೆಯುವ ಸೂಚನೆಗೆ ಬದಲು ನಿಯಮ ೩೩ಳಿರಲ್ಲಿ ಹಾಕಿಕೊಟ್ಟಿದ್ದಾರೆ. ಈಗ ಇದರಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಇರುವುದಿಲ್ಲ. ಇದು ನನ್ನ ತಾಲ್ಲೂಕಿನಲ್ಲಿ ಬಹಳ ಗಹನವಾಗಿರತಕ್ಕ ವಿಚಾರವಾಗಿದೆ.

ಛೇರ್ಮನ್ —ಅದು ೩೩ಳಿರಲ್ಲಿ ಬರುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿಯಮ ೩೩ಳಿರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನನ್ನ ಆಭ್ಯಂತರವಿಲ್ಲ. ನಾನು ನೀರಾವರಿ ಮಂತ್ರಿಗಳನ್ನು ಕೇಳುತ್ತೇನೆ. ನನ್ನ ತಾಲ್ಲೂಕಿನಿಂದ ೩–೪ ತಿಂಗಳಿಂದೀಚೆಗೆ ೫–೬ ಸಾವಿರ ಜನ ಹೊಟ್ಟೆಪಾಡಿಗಾಗಿ ಬೆಂಗಳೂರು ನಗರಕ್ಕೆ ಬರುತ್ತಾ ಇದ್ದಾರೆ. ಅದಕ್ಕೋಸ್ಕರ ಒಂದು ಏತನೀರಾವರಿ ಮಾಡಬೇಕು. ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು ಎನ್ನುವ ವಿಚಾರದಲ್ಲಿ ಈ ಸದನದ ಗಮನವನ್ನು ಸೆಳೆದಿದ್ದ. ಈಗ ೩೩ಳಿರ ನಿಯಮದಲ್ಲಿ ಹಾಕಿದ್ದೀರಿ. ಆದ್ದರಿಂದ ೩೩ಳಿರಲ್ಲಿ ಚರ್ಚೆ ಮಾಡಲು ನನಗೆ ಅವಕಾಶ ಕೊಡುತ್ತೀರಾ ಹೇಳಿ.

ಛೇರ್ಮನ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅದನ್ನು ಪರಿಶೀಲನೆ ಮಾಡುವುದಲ್ಲ,

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರಕ್ಕೆ ನಾಗಮಂಗಲದವರು, ಕುಣಿಗಲ್‌ನವರು ಬಂದರೆ ಸ್ವಾಗತ ಮಾಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ —ಇವತ್ತು ಬಿಟ್ಟರೆ ಸಾಧ್ಯವಾಗುವುದಿಲ್ಲ. ತಾವು ಅವಕಾಶ ಕೊಡಬೇಕು. ಚಾಮರಾಜನಗರದ ಬಗ್ಗೆ ಇಂತಹ ಸಂದರ್ಭ ಬಂದಾಗ ತಾವು ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ನನಗೂ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

ಛೇರ್ಮನ್.—ಮಲ್ಲಿಕಾರ್ಜುನ ಖರ್ಗೆ ಮತ್ತು ರಾಜೂ ಗೌಡರ ಗಮನ ಸೆಳೆಯುವ ಸೂಚನೆಗಳನ್ನು ಸಂಬಂಧಪಟ್ಟ ಮಂತ್ರಿಗಳು ಮುಂದಕ್ಕೆ ಹಾಕಬೇಕೆಂದು ಕೇಳಿರುವುದರಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

ರಾಜ್ಯದಲ್ಲಿ ಭೂನ್ಯಾಯ ಮಂಡಳಿಯ ಮೇಲ್ಮನವಿ ಪ್ರಾಧಿಕಾರ ರಚನೆ ಮಾಡಿರುವುದರಿಂದ ಗೇಣಿದಾರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ

ಶ್ರೀ ರಮಾನಾಥ ರೈ.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಭೂ ನ್ಯಾಯ ಮಂಡಳಿಯ ಮೇಲ್ಮನವಿ ಪ್ರಾಧಿಕಾರ ರಚನೆ ಮಾಡಿರುವುದರಿಂದ ಗೇಣಿದಾರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

SRI AZEEZ SAIT (Revenue Minister).—Mr. Speaker Sir, The orders of the Land Tribunals are final and the aggrieved parties have to file the writ petition before the High Court of Karnataka. The disposal of land reforms cases were considerably delayed as the High Court was over-burdened. These cases while disposing of writ petition No. 28441/81 the High Court made the observation that disposable cases by land tribunals is not satisfactory and suggested creation of a Board of Appeal at District leve for proper adjudication of cases. Accordingly, the land Reforms Act was amended during 1986 providing for the creation of land reforms appellate authority at district level. The land reforms

appellate authority shall consist of two Judicial Officers in the cadre of Civil Judge and a Revenue Officer not below the rank of Deputy Commissioner. These authorities have to dispose of cases finally and take additional evidence of both parties. The parties can be represented by Advocates. Merely because some orders are quashed against the tenants. It cannot be said that these appellate authorities are causing injustice to the tenants. There is also a provision for filling review petition against the orders of the appellate authority and in few cases, parties have filed review petitions and in most cases, the orders of the land reforms appellate authority have been accepted by the parties.

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಸಭಾಧ್ಯಕ್ಷರೆ, ಈ ಭೂ ನ್ಯಾಯ ಮಂಡಲಿಗಳ ಮೇಲ್ಮನವಿ ಪ್ರಾಧಿಕಾರವನ್ನು ಅಪೀಲುಗಳು ಬೇಗ ಇತ್ಯರ್ಥವಾಗುವ ಉದ್ದೇಶದಿಂದ ರಚಿಸಲಾಯಿತು ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಇದರಿಂದ ಗೇಣಿದಾರರಿಗೆ ಅನುಕೂಲವಾಗುವ ಬದಲು ದೊಡ್ಡ ಅನಾಹುತವೇ ಆಗುತ್ತಿದೆ. ಭೂಸುಧಾರಣಾ ಕಾನೂನನ್ನು ಯಾವ ಒಂದು ಘನ ಉದ್ದೇಶವನ್ನು ಇಟ್ಟುಕೊಂಡು ಜಾರಿಗೆ ತಂದು, ಬಡ ಗೇಣಿದಾರರಿಗೆ ಅನುಕೂಲ ಮಾಡಿಕೊಡಲಾಗಿತ್ತೋ ಆದಕ್ಕೆ ವಿರುದ್ಧವಾಗಿ ಈ ಭೂ ನ್ಯಾಯ ಮಂಡಲಿಯ ಮೇಲ್ಮನವಿ ಪ್ರಾಧಿಕಾರದಲ್ಲಿ ಭೂ ಮಾಲೀಕರಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನವಾಗುತ್ತಿವೆ. ಸಂಪೂರ್ಣ ೮೦-೯೦ ಪರ್ಸೆಂಟ್ ಕೇಸುಗಳು ಭೂಮಾಲೀಕರ ಪರವಾಗಿ ತೀರ್ಮಾನ ಆಗುತ್ತಿವೆ. ಗೇಣಿದಾರರಿಗೆ ಸಂಬಂಧಪಟ್ಟಂತೆ, ರೆಕಾರ್ಡ್‌ನಲ್ಲಿ ಹೆಸರುಗಳು ಇಲ್ಲ. ಪಹಣಿಯಲ್ಲಿ ಹೆಸರುಗಳು ಇಲ್ಲ. ಗೇಣಿ ರಶೀದಿ ಇಲ್ಲ ಎಂದು ಹೇಳಿ ಗೇಣಿದಾರರ ಎಲ್ಲ ಅರ್ಜಿಗಳನ್ನು ತಿರಸ್ಕಾರ ಮಾಡಿ, ಭೂ ನ್ಯಾಯ ಮಂಡಲಿಗಳು ಗೇಣಿದಾರರ ಪರವಾಗಿ ತೀರ್ಪು ಕೊಟ್ಟು ಭೂಮಿ ಕೊಡಲಾಗಿತ್ತೋ, ಅದಕ್ಕೆ ವಿರುದ್ಧವಾಗಿ ಭೂಮಾಲೀಕರಿಗೆ ಭೂಮಿ ವಾಪಸ್ಸು ಕೊಡುವಂತೆ ತೀರ್ಮಾನ ಆಗುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಹೆಚ್ಚಿನ ಪ್ರಮಾಣದಲ್ಲಿ ಗೇಣಿದಾರರಿಗೆ ತೊಂದರೆಯಾಗಿದೆ. ಈ ಅನ್ಯಾಯವನ್ನು ಹೋಗಲಾಡಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳಬೇಕು. ಹಿಂದೆಲ್ಲಾ ಕಂದಾಯ ಸಚಿವರ ಗಮನಕ್ಕೆ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದರೂ ಕೂಡ ಯಾವುದೇ ಪರಿಣಾಮ ಆಗಲಿಲ್ಲ. ಇವತ್ತು ಅಪಲೇಟ್ ಟ್ರಿಬ್ಯುನಲ್‌ನಲ್ಲಿ ರಾತ್ರಿ ೮ ಗಂಟೆಯವರೆಗೂ ಕೂತು ತೀರ್ಮಾನ ಮಾಡುತ್ತಿದ್ದಾರೆ. ಭೂ ಮಾಲೀಕರು ಈತ ತನ್ನ ವಕ್ಕಲು ಎಂದು ಒಪ್ಪಿಕೊಂಡರೂ ಗೇಣಿದಾರನ ಪರವಾಗಿ ತೀರ್ಮಾನ ಮಾಡುತ್ತಿಲ್ಲ. ಆದ್ದರಿಂದ ತಕ್ಷಣವೇ ಅಪಲೇಟ್ ಟ್ರಿಬ್ಯುನಲ್ಲನ್ನು ಸ್ಥಗಿತಗೊಳಿಸಿ, ವಕ್ಕಲಂಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಟ್.— ಈಗ ಇರತಕ್ಕ ವಿಷಯವನ್ನು ಹೇಳಿದ್ದೇನೆ. ಸರ್ಕಾರಕ್ಕೆ ಸಾಕಷ್ಟು ದೂರುಗಳು ಈ ಬಗ್ಗೆ ಬಂದಿವೆ. ಅಪಲೇಟ್ ಟ್ರಿಬ್ಯೂನಲ್‌ನಿಂದ ಬಹಳಷ್ಟು ಹಾನಿಯಾಗುತ್ತಿದೆ, ನಿಜವಾದ ಗೇಣಿದಾರರಿಗೆ ತೊಂದರೆಯಾಗುತ್ತಿದೆಯೆಂದು ದೂರುಗಳು ಬಂದಿವೆ. ಮಂತ್ರಿಮಂಡಲದಲ್ಲಿ ಕೂಡ ಕೆಲವು ಮಂತ್ರಿಗಳು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಎಲ್ಲ ವಿಚಾರ ನನ್ನ ಗಮನದಲ್ಲಿದೆ. ಇದನ್ನು ಯಾವ ರೀತಿ ಬದಲಾವಣೆ ಮಾಡಬೇಕು. ಹಿಂದೆ ಇದ್ದಂತೆ ಹೈಕೋರ್ಟಿಗೆ ಕೊಡುವುದೆ, ಹೇಗೆ ಮಾಡುವುದು ಎನ್ನುವ ವಿಚಾರದ ಬಗ್ಗೆ ಆಲೋಚನೆ ಮಾಡುತ್ತಿದ್ದೇನೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಬಹುಶಃ ಅತಿ ಶೀಘ್ರದಲ್ಲಿ ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಮಾನಾಥ ರೈ.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಈ ಭೂ ಸುಧಾರಣಾ ಕಾನೂನು ಕ್ರಾಂತಿಕಾರಿ ಕಾನೂನಾಗಿ ಜಾರಿಯಾಗಿತ್ತು. ನಿಜವಾಗಿಯೂ ನೋಡುವುದಾದರೆ ಕೇರಳ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ/ನಾಯಕತ್ವದಲ್ಲಿ ಇವತ್ತು ಭೂ ಸುಧಾರಣಾ ಕಾನೂನು ಏನು ಜಾರಿಯಾಗಿತ್ತೊ, ಅದಕ್ಕಿಂತಲೂ ಬಹಳ ಕ್ರಾಂತಿಕಾರವಾಗಿ ಮಾನ್ಯ ದೇವರಾಜ್ ಅರಸುರವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಗೇಣಿದಾರನಿಗೆ ಸರಿಯಾದ ನ್ಯಾಯ ದೊರೆಯಬೇಕೆನ್ನುವ ದೃಷ್ಟಿಯಲ್ಲಿ ಇಲ್ಲಿ ಒಂದು ಕ್ರಾಂತಿಕಾರಿ ಭೂ ಸುಧಾರಣೆ ಕಾನೂನನ್ನು ಜಾರಿ ಮಾಡಿದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಮೇಲ್ಮನವಿ ಪ್ರಾಧಿಕಾರ ಪ್ರಾರಂಭ ಮಾಡಿದ್ದರಿಂದ ಅನೇಕ ಗೇಣಿದಾರರಿಗೆ ಇವತ್ತು ಅನ್ಯಾಯವಾಗುತ್ತಿದೆ. ಅವರಿಗೆ ಈ ಮೇಲ್ಮನವಿ ಪ್ರಾಧಿಕಾರದಲ್ಲಿ ಹಾಜರಾದಾಗ ಅವರಲ್ಲಿ

ಸರಿಯಾದ ದಾಖಲಾತಿ ಖಂಡಿತವಾಗಿ ಇರುವುದಿಲ್ಲ. ಆದೇ ಭೂ ನ್ಯಾಯಮಂಡಲಿಯ ಸದಸ್ಯರುಗಳು ಯಾರು ನಿಜವಾಗಿ ಆ ಒಂದು ಕೃಷಿ ಜಮೀನಿನಲ್ಲಿ ಬೇಸಾಯ ಮಾಡುತ್ತಿದ್ದಾರೆಂದು ಪ್ರತ್ಯೇಕ್ಷವಾಗಿ ನೋಡಿ ಅಂತಹವರಿಗೆ ಗೇಣಿದಾರರ ಹಕ್ಕನ್ನು ಕೊಡತಕ್ಕ ವ್ಯವಸ್ಥೆ ಇತ್ತು. ಹೀಗೆ ತಾಲ್ಲೂಕು ಮಟ್ಟದ ಭೂ ನ್ಯಾಯ ಮಂಡಲಿಯಲ್ಲಿ ಸರಿಯಾಗಿ ಕೆಲಸ ಆಗುತ್ತಿತ್ತು. ಹಿಂದಿನ ಸರ್ಕಾರ ಭೂ ಮಾಲೀಕರಿಗೆ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ಈ ಮೇಲ್ಮನವಿ ಪ್ರಾಧಿಕಾರವನ್ನು ರಚನೆ ಮಾಡಿದ್ದಾರೆ. ಇದಕ್ಕೆ ಒಬ್ಬ ವಿಶೇಷ ಜಿಲ್ಲಾಧಿಕಾರಿ. ಹಾಗೂ ಒಬ್ಬ ಜ್ಯುಡಿಷಿಯಲ್ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಇಲ್ಲಿ ಗೇಣಿದಾರರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಬಹಳಷ್ಟು ಪ್ರಕರಣಗಳು ಭೂ ಮಾಲೀಕನ ಪರವಾಗಿ ತೀರ್ಮಾನ ಆಗುವುದನ್ನು ನಾವು ಕಾಣುತ್ತೇವೆ. ಖಂಡಿತವಾಗಿ ಗೇಣಿದಾರನಿಗೆ ಅನುಕೂಲ ಆಗಬೇಕೆಂದು ಈ ಕಾನೂನು ಜಾರಿಯಾಗಿತ್ತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಭೂ ಮಾಲೀಕರಿಗೆ ಅನುಕೂಲವಾಗುವಂತೆ ಹಿಂದಿನ ಸರ್ಕಾರದವರು ಒಂದು ಪ್ರಯತ್ನ ಮಾಡಿದ್ದರು. ಈ ಒಂದು ಮೇಲ್ಮನೆ ಪ್ರಾಧಿಕಾರದಲ್ಲಿ ಎಷ್ಟು ಅರ್ಜಿಗಳು ಇತ್ಯರ್ಥವಾಗಿದೆಯೋ ಅದನ್ನು ಮತ್ತೆ ತಾಲ್ಲೂಕು ಮಟ್ಟದ ಭೂ ನ್ಯಾಯ ಮಂಡಲಿಗೆ ರೆಫರ್ ಮಾಡಿ ಅಲ್ಲಿ ಮತ್ತೆ ಗೇಣಿದಾರರು ಬದುಕುವಂತಹ ಸಹಾಯವನ್ನು ಮಾನ್ಯ ಕಂದಾಯ ಮಂತ್ರಿಗಳು ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ),—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಎದ್ದು ನಿಂತಿದ್ದೇನೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಈ ವಿಚಾರ ಸದನದಲ್ಲಿ ಚರ್ಚೆಗೆ ಬಂದಾಗ ಈ ರೀತಿಯಲ್ಲಿ ಅಪಲೆಟ್ ಟ್ರಿಬ್ಯೂನಲ್ ಮಾಡಿರುವುದರಿಂದ ಗೇಣಿದಾರನಿಗೆ ಅನ್ಯಾಯವಾಗುತ್ತದೆಂದು ವಿವರವಾಗಿ ಚರ್ಚೆ ಮಾಡಿದ್ದೇವೆ. ಏಕೆಂದರೆ ಈ ಭೂ ಸುಧಾರಣಾ ಕಾನೂನಿನಲ್ಲಿ ಒಬ್ಬ ವ್ಯಕ್ತಿಗೆ ಹಿಡುವಳಿಯ ಹಕ್ಕನ್ನು ಕೊಡಬೇಕೆಂದು ಇದ್ದರೆ, ಅವನಿಗೆ ಪಹಣಿ ಇತ್ಯಾದಿ ದಾಖಲೆಗಳು ಇರಲೇಬೇಕೆಂದು ಭೂ ಸುಧಾರಣಾ ಕಾನೂನಿನಲ್ಲಿ ಮಾಡಿಲ್ಲ. ಏಕೆಂದರೆ ಎಲ್ಲರಿಗೂ ಪಹಣಿ ಇರಬೇಕೆಂಬುದಿಲ್ಲ. ಗೇಣಿ ಕೊಟ್ಟಿದ್ದಕ್ಕೆ ರಶೀದಿ ಇರುವುದಿಲ್ಲ. ಗೇಣಿದಾರ ಅವಿದ್ಯಾವಂತನಾಗಿರುವುದರಿಂದ ಅದರ ದುರುಪಯೋಗ ಆಗಬಹುದೆಂಬ ದೃಷ್ಟಿಯಿಂದ ಅವನ ಸ್ವಾಧೀನದಲ್ಲಿರುವುದನ್ನು ನೋಡಿಕೊಂಡು ಟ್ರಿಬ್ಯೂನಲ್‌ನವರು ತೀರ್ಮಾನಬರೆಯಬೇಕು ಮತ್ತು ಹೈಕೋರ್ಟ್‌ನವರು ಇದನ್ನೆಲ್ಲಾ ನೋಡಿ ವಿಚಾರ ಮಾಡಬೇಕೆನ್ನುವ ದೃಷ್ಟಿಯಿಂದ ಕರ್ನಾಟಕ ಭೂ ಸುಧಾರಣಾ ಕಾನೂನನ್ನು ಬಹಳ ಆಳವಾಗಿ ಅಭ್ಯಾಸ ಮಾಡಿ, ಚರ್ಚೆ ಮಾಡಿ ಈ ಕಾನೂನನ್ನು ಜಾರಿಗೆ ತಂದಿದ್ದರು. ಆದರೆ ಇವತ್ತು ಅಪಲೆಟ್ ಟ್ರಿಬ್ಯೂನಲ್ ಮಾಡಿರುವುದರಿಂದ ಏನಾಗಿದೆಯೆಂದರೆ ಅವರು ಗೇಣಿ ಕೊಟ್ಟಿರುವುದಕ್ಕೆ ಸ್ಟಾರ್ ರೆಂಟ್ ರಶೀದಿ ಕೇಳಿದರೆ ಮತ್ತು ಪಹಣಿ ಅಕೌಂಟ್ ಕೇಳಿದರೆ ಅವುಗಳನ್ನು ಎಲ್ಲಿಂದ ತಂದು ಕೊಡುವುದಕ್ಕೆ ಗೇಣಿದಾರರಿಗೆ ಸಾಧ್ಯವಾಗುತ್ತದೆ ? ನನಗೆ ಗೊತ್ತಿರುವ ಹಾಗೆ ಪಹಣಿ ಅಕೌಂಟನ್ನು ಹಳೆಯ ಬಾಂಬೆ ಕರ್ನಾಟಕ ರಾಜ್ಯದವರು ಇಟ್ಟಿದ್ದರು. ಇದರಿಂದ ಕಾರವಾರ, ಧಾರವಾಡ, ಬಿಜಾಪುರ, ಬೆಳಗಾಂ ಕಡೆಯವರಿಗೆ ಬಹಳ ಉಪಯೋಗವಾಗಿದೆ. ಸ್ವಲ್ಪವಷ್ಟಿಗೆ ಹೈದರಾಬಾದ್ ಕರ್ನಾಟಕದಲ್ಲಿಯೂ ಸಹ ಈ ತೊಂದರೆ ಇದೆ. ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಪಹಣಿ ಅಕೌಂಟ್ ಇಲ್ಲ. ಹಳೆಯ ಮೈಸೂರು ರಾಜ್ಯದಲ್ಲಿ ಇವೆಲ್ಲವೇ ಇಲ್ಲ. ಸುಮಾರು ನೂರಕ್ಕೆ ೬೦ ರಿಂದ ೭೦ರಷ್ಟು ಗೇಣಿದಾರರಿಗೆ ಯಾವುದೇ ದಾಖಲೆ ಸಿಕ್ಕುವುದಿಲ್ಲ. ಅದರ ಅರ್ಥ ಏನು ? ಇದರಿಂದ ಇವ್ಹತ್ತು ಸಂಪೂರ್ಣವಾಗಿ ಭೂಮಿಯನ್ನು ಕಳೆದುಕೊಳ್ಳುವ ಪರಿಸ್ಥಿತಿ ಇದೆ ಶ್ರೀಮಾನ್ ರೈ ಅವರು ಹೇಳಿದ ಹಾಗೆ ದೇವರಾಜ್ ಅರಸ್ ಅವರ ಕಾಲದಲ್ಲಿ ಒಂದು ಸದುದ್ದೇಶದಿಂದ ಇಂತಹ ಕಾನೂನು ನಾವೆಲ್ಲರೂ ಸೇರಿ ಮಾಡಿದ್ದೆವು, ಜಾರಿಗೂ ಸಹ ತಂದೆವು. ಇದು ಸಂಪೂರ್ಣವಾಗಿ ತದ್ವಿರುದ್ಧವಾಗಿ ಹೊರಟುಹೋಯಿತು. ಹಿಂದಿನ ಸರ್ಕಾರ ಇದ್ದಂಥ ಕಾಲದಲ್ಲಿ ಎನ್ನತಕ್ಕ ಮಾತು ನಮಗೆಲ್ಲಾ ಗೊತ್ತಿದೆ. ಸುಮಾರು ಆರು ಲಕ್ಷ ಚಿಲ್ಲರೆ ಜನ ಗೇಣಿದಾರರು ಇದ್ದಾರೆ. ಎಷ್ಟು ಜನರಿಗೆ ಹಿಡುವಳಿ ಹಕ್ಕು ಕೊಡಲಿಕ್ಕೆ ಸಾಧ್ಯವಾಗಿದೆ. ಕೊಟ್ಟಿರತಕ್ಕಂತಾದ್ದು ಎಷ್ಟು ಜನರು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗಿದೆ ಇವ್ಹೊತ್ತು ಈ ಎಲ್ಲಾ ಪ್ರಶ್ನೆಗಳು ಇದರಲ್ಲಿ ಅಡಗಿರುವುದರಿಂದ, ಈ ಅಪಲೆಟ್ ಟ್ರಿಬ್ಯೂನಲ್‌ಗಳಿಂದ ದೊಡ್ಡ ಅನಾಹುತವಾಗಿ ಎಲ್ಲಾ ಇಡೀ ಗೇಣಿದಾರರ ಕುಟುಂಬಗಳು ನಾಶವಾಗುವ ಮಟ್ಟಕ್ಕೆ ಹೊರಟು ಹೋಗಿವೆ. ದಯಮಾಡಿ ತಕ್ಷಣ ಇದನ್ನು ಅಬಾಲಿಷ್ ಮಾಡತಕ್ಕಂಥ ವಿಚಾರವನ್ನು ನಾನು ಈಗಾಗಲೇ ತಮ್ಮ ಜೊತೆ ಮಾತನಾಡಿದ್ದೇನೆ. ಅದನ್ನು ತೀರ್ಮಾನ ಮಾಡಬೇಕಾಗಿದೆ. ಈಗ ಕೇಸುಗಳು ಸೆಟಲ್ ಮಾಡಲಿಕ್ಕೆ ರಾತ್ರಿ ೮ ಗಂಟೆಗಳವರೆಗೆ ಕೋರ್ಟ್ ನಡೆಯುತ್ತವೆ ಎಂದು ಹೇಳುತ್ತಾರೆ ನಾವು ಇಲ್ಲಿ ಭಾಷಣ ಮಾಡುತ್ತಿರುತ್ತೇವೆ, ನೀವು ವಿಚಾರ ಕೇಳುತ್ತಿರುತ್ತಿರಿ. ಅಲ್ಲಿ ಜಡ್ಜ್‌ಮೆಂಟ್ ಅನ್ನು ಗೇಣಿದಾರರಿಗೆ ಎಗೆನೆಸ್ಟ್ ಆಗಿ ಬರೆಯುತ್ತಿದ್ದಾರೆ. ಇದರಿಂದ ಗೇಣಿದಾರರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ ಹೀಗಾದರೆ ಅವರುಗಳ ಗತಿ ಏನಾಗಬೇಕು. ಈಗ ಎಲ್ಲೆಲ್ಲಿ ೨-೩ ಅಪಲೆಟ್ ಟ್ರಿಬ್ಯೂನಲ್ ಇದೆ,

ಅದನ್ನು ತೆಗೆದು ಜಿಲ್ಲೆಗೆ ಒಂದೊಂದು ಮಾಡುತ್ತಾ ಹೋಗಿದ್ದೀರಿ ಇದೇ ಸಮಯದಲ್ಲಿ ಸದ್ಯಕ್ಕೆ ಇದು ಬೇಡ ಎನ್ನುತಕ್ಕ ತೀರ್ಮಾನವನ್ನು ಮಾಡಿ. ತಾವು ಅಂತಿಮ ತೀರ್ಮಾನ ಮಂತ್ರಿಮಂಡಲದಲ್ಲಿ ತೆಗೆದುಕೊಂಡು ಸರ್ಕಾರದ ಆಜ್ಞೆ ಹೊರಡುವವರೆಗೆ ಆಲ್‌ಟ್ರೈನೇಟೀವ್ ಆಗಿ ಹೈಕೋರ್ಟ್‌ಗೆ ಹಿಂದೆ ಇದ್ದಹಾಗೆ ಬಿಡಬೇಕೆ, ಅಥವಾ ಮಧ್ಯದಲ್ಲಿ ಮತ್ತೊಂದು ಏನಾದರೂ ರಚನೆ ಮಾಡಬೇಕೇ ಅದರ ಬಗ್ಗೆ ವಿಚಾರ ಮಾಡಿ. ನಾನು ಬೇಡ ಎಂದು ಹೇಳುವುದಿಲ್ಲ. ಈ ಮಧ್ಯ ಏನು ಅನಾಹುತ ಆಗುತ್ತದೆ. ಹೈಕೋರ್ಟ್‌ನಲ್ಲಿ ರಿವಿಜನ್‌ಗೆ ಹೋಗಿದ್ದರೆ ಅದು ಅಡ್ಮಿಟ್ ಆಗುತ್ತದೆಂಬ ಬಗ್ಗೆ ಕೂಡ ನಮಗೆ ಅನುಮಾನ ಆಗುತ್ತಿದೆ. ಆದ್ದರಿಂದ ನಾನು ಹೇಳುವಂತಾದ್ದು ಈ ಅಪಲೇಟ್ ಟ್ರಿಬ್ಯೂನಲ್ ಕೆಲಸ ನಿಲ್ಲಿಸಿ ಎಂದು ನಾನು ಹೇಳುತ್ತೇನೆ. ಇಲ್ಲಿ ಒಂದು ಕಡೆ ಈತನಿಗೆ ಈ ಹೊಡೆತ ಬೀಳುತ್ತದೆ, ಇನ್ನೊಂದು ಕಡೆಗೆ ಈ ವಿಚಾರದಲ್ಲಿ ಕವರ್ ಆಗಿಲ್ಲ ಎಂದು ತಾವು ಹೇಳಬಹುದು. ಕಾರವಾರ, ಶಿವಮೊಗ್ಗ ನಮ್ಮ ತಾಲೂಕಿನಲ್ಲೆಲ್ಲಾ ಸರ್ಕಾರೀ ಫಡಾ ಎಂದು ಬರೆಯುತ್ತಿದ್ದಾರೆ. ಗೇಣಿದಾರರ ಪ್ರಶ್ನೆ ಬಂದಾಗ ಒಂದು ಕಡೆ ಭೂಮಿ ಇಲ್ಲಿ ಕಳೆದುಕೊಳ್ಳುತ್ತಾರೆ, ಅಲ್ಲಿ ಮತ್ತೊಂದುಕಡೆ ತೊಂದರೆಯಾಗುತ್ತದೆ. ಈಗ ಭೂಸುಧಾರಣೆ ಕಾಯಿದೆಯ ಉದ್ದೇಶ ಏನಾಗುತ್ತದೆ ಎನ್ನುವುದೇ ನಮ್ಮ ಮುಂದಿರುವ ಪ್ರಶ್ನೆ. ಮಾನ್ಯ ಸಚಿವರು ಅನುಭವಸ್ಥರಿದ್ದೀರಿ, ಇದರಲ್ಲಿ ಆಳವಾಗಿ ಅಭ್ಯಾಸ ಮಾಡಿದವರು. ಎ ಟು ಜಡ್ ತಿಳಿದುಕೊಂಡಿರುವವರು. ಇವರೆ ಹೆಸರೇ ಎ ಟು ಜಡ್ ಇರುವುದರಿಂದ ತಕ್ಷಣ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಅಜೀಜ್‌ಸೇಠ್.—ಅಧ್ಯಕ್ಷರೆ, ಇದು ರಾಜಕೀಯ ಮಾಡಿ ಹತ್ತಾರು ಜನ ಮಾತನಾಡಿ ಅದು ಪತ್ರಿಕೆಯಲ್ಲಿ ಬಂದು, ಇಂತಹವರ ಒತ್ತಡಕ್ಕೆ ಮಾಡಿದರು ಎಂದು ಹೆಸರು ಹೇಳಿಕೊಳ್ಳುವುದು ಬೇಡ. ಈಗ ತಾನೇ ಸೂಕ್ಷ್ಮವಾಗಿ ಹೇಳಿದ್ದಾರೆ, ಇದು ರೆವಲ್ಯೂಷನರಿ ಆಕ್ಟ್ ಆಗಿದ್ದರೂ ಡಿಫಿನಿಟ್ ಆಗುತ್ತಿದೆ. ಇದರಿಂದ ರೈತರಿಗೆ ತೊಂದರೆ ಆಗುತ್ತಿದೆ, ಮಾಲೀಕರಿಗೆ ಅನುಕೂಲವಾಗುತ್ತಿದೆ. ಎಂದು ಹೇಳಿದ್ದಾರೆ. ನನ್ನ ಕ್ಯಾಬಿನೆಟ್ ಚೀಫ್ ವಿನಿಸ್ಟರ್‌ರವರಿಂದ ಓಡಿದು ಎಲ್ಲಾ ಮಂತ್ರಿಗಳು ಇದರ ವಿರುದ್ಧವಾಗಿ ಇದನ್ನು ತೆಗೆಯಬೇಕೆಂದು ಹೇಳುತ್ತಿದ್ದಾರೆ. ಇಷ್ಟೇ ವಿಷಯ ಇರುವುದು. ಈಗ ಅಪಲೇಟ್ ಟ್ರಿಬ್ಯೂನಲ್ ತೆಗೆದುಹಾಕಿದರೆ ಪುನಃ ಹೈಕೋರ್ಟಿಗೆ ಅಧಿಕಾರ ಕೊಡಬೇಕೇ, ಹೈಕೋರ್ಟ್‌ಗೆ ಅಧಿಕಾರ ಕೊಟ್ಟರೆ ತೀರ್ಮಾನ ಆಗಲು ಎಷ್ಟು ವರ್ಷ ಆಗುತ್ತದೆ, ಎಷ್ಟು ತೊಂದರೆಯಾಗುತ್ತದೆ ಎಂದು ನೋಡಬೇಕಾಗುತ್ತದೆ. ಇಲ್ಲಿ ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಇದನ್ನು ಲಿಟಿಗೇಷನ್‌ಗೆ ಹಾಕಿಬಿಟ್ಟರೆ, ವಾದಿಗೆ ಕಷ್ಟ, ಲಾಯರ್‌ಗೆ ಅದೃಷ್ಟ ಜಡ್ಜ್ ಅವರ ಇಷ್ಟ ಎಂಬಂತೆ ಆಗುತ್ತದೆ

ಚೇರ್‌ಮನ್.—ಬಹಳ ಪ್ರಾಸಬದ್ಧವಾಗಿ ಹೇಳಿದರು.

ಶ್ರೀ ಅಜೀಜ್ ಸೇಠ್.—ಇಲ್ಲಿ ಹಾವು ಸಾಯಬೇಕು ಆದರೆ ಕೋಲು ಮುರಿಯಬಾರದು ಮುಖ್ಯವಾಗಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಅವರು ಹೈಕೋರ್ಟಿಗೆ ಹೋದರೆ ತೊಂದರೆ ಆಗುತ್ತದೆ. ಅಪಲೇಟ್ ಟ್ರಿಬ್ಯೂನಲ್‌ಗೆ ಹೋದರೆ ರೈತರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಇರುವ ಅಪಲೇಟ್ ಟ್ರಿಬ್ಯೂನಲ್ ಅನ್ನು ಕೆಲವು ಕಾಲ ಸಸ್ಪೆಂಡ್ ಮಾಡುವುದೋ ಅಥವಾ ಏನು ಮಾಡುವುದೂ ಎಂಬ ಬಗ್ಗೆ ಒಂದು ವಾರದಲ್ಲಿ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದು ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಪ್ರಯತ್ನ ಮಾಡುತ್ತೇನೆ. ಇದಕ್ಕೆ ನಿಮ್ಮ ಸಹಕಾರ ಬೇಕು. ಇಲ್ಲಿ ಚರ್ಚೆ ಮಾಡಿ ಕಾಲವ್ಯಯ ಮಾಡುವುದು ಬೇಡ. ನಮಗೆ ಕೆಲಸ ಮಾಡಲು ಅವಕಾಶ ಮಾಡಿಕೊಡಿ ಈ ಬಗ್ಗೆ ತಮಗೆ ಏನು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಕಳಕಳಿ ನನಗೂ ಇದೆ. ನಾನು ಸಹ ಜಮೀನು ಕಳೆದುಕೊಂಡಿದ್ದೇನೆ. ಆದರೂ ರೈತರ ಬಗ್ಗೆ ಕಳಕಳಿ ಇದೆ. ಆದ್ದರಿಂದ ಇದರ ಚರ್ಚೆಯನ್ನು ಇಲ್ಲಿಗೆ ಮುಗಿಸೋಣ ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಸಿವಿಲ್ ಕೋರ್ಟ್‌ನಲ್ಲಿ ಕೆಲಸ ಕಡಿಮೆ ಇದೆ ಅವರಿಗೆ ಇದರ ಅಧಿಕಾರ ಕೊಡಿ...

(ಗೊಂದಲ)

SRI AZEEZ SAIT.—I will consider it

ಶ್ರೀ ಆರ್. ವಿ. ದೇಶಪಾಂಡೆ.—ಅಪಿಲೇಟ್ ಟ್ರಿಬ್ಯೂನಲ್ ಎಂದು ಏನು ಫಾರಂ ಮಾಡಿದ್ದಾರೆ, ಇದರಿಂದ ರೈತರಿಗೆ ತೊಂದರೆ ಆಗುತ್ತಿದೆ ಎಂದು.....

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ —ಮಾನ್ಯ ಅಧ್ಯಕ್ಷರೇ ಅಪಲೇಟ್ ಟ್ರಿಬ್ಯುನಲ್ ಅನ್ನು ಏನು ಘಾರಂ ಮಾಡಿದ್ದಾರೆ ಇದರಿಂದ ಬಹಳ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ದಿವಂಗತ ದೇವರಾಜ ಅರಸ್‌ರವರು ಭೂಸುಧಾರಣಾ ಕಾನೂನನ್ನು ಜಾರಿಗೆ ತಂದರು. ಇದು ಅಲ್ಲಿಗೇ ನಿಲ್ಲಲಿಲ್ಲ. ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಯಾದ ನಂತರ ಅಪಲೇಟ್ ಟ್ರಿಬ್ಯುನಲ್ ಅನ್ನು ರಚನೆ ಮಾಡಿದರು. ಇದರಿಂದ ರೈತರಿಗೆ ಅನ್ಯಾಯವಾಗಿದೆ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ತಯಾರಿಲ್ಲ

(ಗೊಂದಲ)

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಹೆಗಡೆಯವರ ಸರಕಾರವಾಗಲೀ ಮಾನ್ಯ ಬೊಮ್ಮಾಯಿ ಯವರ ಸರಕಾರವಿದ್ದಾಗ ಆಗಲೀ ರೈತರಿಗೆ ಅನ್ಯಾಯವಾಗಿದೆ ಎಂದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. I am not going to be cowed down by this majority.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ ನಾವು ಎಲ್ಲಿದ್ದೇವೆಂದು ಅರಿತುಕೊಂಡು ಸಭೆ ನಡೆಸುವುದು ಒಳ್ಳೆಯದು. ಈ ವಿಚಾರ ಗಮನ ಸೆಳೆಯುವ ಸೂಚನೆ ಪಟ್ಟಿಯಲ್ಲಿದೆ. ಯಾರು ಸೂಚನೆ ಕೊಟ್ಟಿದ್ದಾರೆ. ಅವರು ತಮ್ಮ ಅನುಮತಿ ಪಡೆದು ಕೆಲವು ಸ್ಪಷ್ಟೀಕರಣ ಕೇಳಬಹುದು. ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಮೊದಲು ಇದನ್ನು ಅವಮಾನಕ್ಕಿನಲ್ಲಿಡ ಬೇಕೇ ಬೇಡವೇ ಎಂಬ ವಿಚಾರ ಇದೆ. ಮಾನ್ಯ ಬಂಗಾರಪ್ಪನವರು ಮಾತನಾಡುವಂತಹ ವಿಚಾರದ ಬಗ್ಗೆ ಮಾನ್ಯ ದೇಶಪಾಂಡೆಯವರು ಪ್ರಶ್ನೆ ಎತ್ತಿದ್ದಾರೆ. ಈಗ ಮಾನ್ಯ ರಾಜ್ಯಪಾಲರ ಭಾಷಣದ ಚರ್ಚೆ ಈಗ ಸಭೆಯ ಮುಂದೆ ಇದೆ. ಆಗ ಹಿಂದಿನ ಸರಕಾರ ಮಾಡಿದ್ದು ಸರಿಯೇ ಅಲ್ಲವೇ ಎಂಬ ಬಗ್ಗೆ ಆಗ ವಿಚಾರ ಮಾಡಬಹುದು. ಈ ನಮ್ಮ ಸದನದ ಪರಂಪರೆಯನ್ನು ನಾವು ಮುಖ್ಯವಾಗಿ ಕಾಪಾಡಿಕೊಂಡು ಬರ ಬೇಕಾಗುತ್ತದೆ. ನಿನ್ನೆ ಕೂಡ ಇದೇ ಪ್ರಶ್ನೆ ನಡೆಯಿತು. ಇದು ಅಷ್ಟು ಪ್ರಮುಖವಾದ ವಿಷಯ ವಿದ್ದರೆ ಅರ್ಧ ಗಂಟೆ ಇಲ್ಲವೇ ೨ ಗಂಟೆ ಇದರ ಚರ್ಚೆಗೆ ಹಾಕಿ.

ಆದರೆ ಗಮನ ಸೆಳೆಯುವ ಸೂಚನೆಯು ಬಗ್ಗೆ ಸೂಚನೆಯನ್ನು ಕೊಡಬೇ ಇರತಕ್ಕಂತಹ ಅಥವಾ ಅದಕ್ಕೆ ಸಹಿಯನ್ನು ಹಾಕಬೇ ಇರತಕ್ಕ ಸದಸ್ಯರಿಗೆ ತಾವು ಅವಕಾಶವನ್ನು ಕೊಟ್ಟರೆ ನೀವು ಹೊಸ ಪರಂಪರೆ ಯನ್ನು ಹಾಕಿಕೊಟ್ಟಂತಾಗುತ್ತದೆ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಬಂಗಾರಪ್ಪನವರು ಮಾತನಾಡುವಾಗ...

(ಗೊಂದಲ)

SRI AZEEZ SAIT.— The importance of Appellate Tribunal is being dried away. The important point is, whether this was appointed in the Janatha regime or the Janatha Dal Regime, or appointed by Ramakrishna Hegde or Bommai, whatever it is. But, my friend Sri Deshpande advocated the cause of Sri Rama Krishna Hegde. Mr. Hegde brought it with a good intention. The Appellate Tribanal was constituted during 1986. Now we have to see whether it is serving the purpose for which it was appointed.

(ಶ್ರೀ ಎಸ್. ಎಂ. ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

SRI R. V. DESHPANDE.— I am not objecting for it. It is a fact that we were in power. It was existed.

SRI AZEEZ SAIT.— It may be due to anxiety or in a hurry you might not have considered the pros and cons and the nature of the situation. You went on appointing appellate tribunals ಇವುಗಳಿಂದ ರೈತರಿಗೆ ತೊಂದರೆಯಾಗುತ್ತಿದೆ. ಗೇಣಿದಾರರು ಜಮೀನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಅಪೆಲೆಟ್ ಟ್ರಿಬ್ಯುನಲ್‌ಗಳನ್ನು ನೀವು ಮಾಡಿದ್ದೀರಿ ಇಲ್ಲ ಎಂದು ನಾನು ಹೇಳುವುದಿಲ್ಲ. Whether it may be Mr. Hegde or Mr. Bommai heading the Government, but the fact is that it was appointed during 1986. We have to repair it today. ಕೊನೆಯಲ್ಲಿ ನೀವು ಏನು ಮಾಡಿಹೋಗಿದ್ದೀರಿ ಅದನ್ನು ನಾವು ರಿಪೇರಿ ಮಾಡಬೇಕಾಗಿದೆ. ಅದನ್ನು ರಿಪೇರಿ ಮಾಡಲು ನಾವು ಮುಂದೆ ಬಂದಿದ್ದೇವೆ. ಅದುವರೆಗೂ ನೀವು ತಡೆದುಕೊಳ್ಳಿ.

ಅಧ್ಯಕ್ಷರು.— ಗಂಗಾಧರ ಗೌಡರೆ, ನೀವು ಮಾತನಾಡಿ...

ಶ್ರೀ ವಿ. ಎಸ್. ಕೌಜಲಗಿ.— ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಲಿಲ್ಲ

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ಅಪ್ಪಿಲೆಟ್ ಟ್ರಿಬ್ಯುನಲ್‌ನ್ನು ನಾವು ಮಾಡಿದ್ದೇವೆ.

ಅಧ್ಯಕ್ಷರು.— ನಾನು ಯಾರಿಗೂ ಮಾತನಾಡಲು ಅವಕಾಶ ಕೊಡುವುದಿಲ್ಲ.

(INTERRUPTION)

SRI AZEEZ SAIT.— You brought the name of Sri Ramakrishna Hegde. Why are you touchy?

(INTERRUPTION)

SRI R. V. DESHPANDE.— Sir, the Hon. Member Sri Bangarappa is not a signatory. ಆದರೂ ಮಾತನಾಡಿದ್ದಾರೆ ಈ ಅಪೆಲೆಟ್ ಟ್ರಿಬ್ಯುನಲ್‌ನ್ನು ಅಬಾಲಿಷ್ ಮಾಡಿ. ಹಾಗೆ ಅಬಾಲಿಷ್ ಮಾಡುವುದಕ್ಕೆ ಮುಂಚಿತವಾಗಿ ಸವಿೂಕ್ಷೆ ಮಾಡುತ್ತೇವೆಂದು ಹೇಳಿ...

ಶ್ರೀ ಕೆ. ಗಂಗಾಧರಗೌಡ.— ಮಾನ್ಯ ಅಧ್ಯಕ್ಷರೇ, ಈ ಅಪಿಲೆಟ್ ಟ್ರಿಬ್ಯುನಲ್‌ನಲ್ಲಿ ಕೆಲವರಿಗೆ ಅನ್ಯಾಯವಾಗಿದೆ ಆದರೆ ಹೆಚ್ಚಿನ ಜನರಿಗೆ ತೊಂದರೆ ಆಗಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸ್ವಾಮಿ, ನನ್ನ ಜಿಲ್ಲೆಯಲ್ಲಿ ಸುಮಾರು ಒಂದೂವರೆ ಲಕ್ಷ ಗೇಣಿದಾರರಿದ್ದಾರೆ. ರಾಜ್ಯದಲ್ಲಿ ಒಟ್ಟು ೭ ಲಕ್ಷ ಗೇಣಿದಾರರಿದ್ದಾರೆ. ಅದರ ಪೈಕಿ ಹೆಚ್ಚಿನ ಗೇಣಿದಾರರಿರತಕ್ಕದ್ದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರು ಮಾಡಿರತಕ್ಕ ಅಪಿಲೆಟ್ ಟ್ರಿಬ್ಯುನಲ್‌ನಿಂದಾಗಿ ಸುಮಾರು ೩-೪ ವರ್ಷಗಳಿಂದ ಬಹಳ ಜನರು ತಮ್ಮ ಮನೆಗಳನ್ನು ಜಮೀನುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಅಪಿಲೆಟ್ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್‌ನ್ನು ಕೊಟ್ಟ ಕೂಡಲೇ ಭೂಮಾಲೀಕರು ಬಂದು ಅವರೆನ್ನು ಹೊರಕ್ಕೆ ಎಳೆದು ಹಾಕಿ ಆ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ನಾವು ಇದನ್ನು ಸರಿ ಮಾಡುತ್ತೇವೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಯಾವ ರೀತಿ ಸರಿ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಇವತ್ತು ಆ ಜನರು ಬೀದಿ ಪಾಲಾಗುತ್ತಿದ್ದಾರೆ. ಆದ್ದರಿಂದ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ಅಪ್ಪಿಲೆಟ್ ಕೋರ್ಟ್ ಕೆಲಸವನ್ನು ಕೂಡಲೇ ಸ್ಥಗಿತಗೊಳಿಸಬೇಕು. ಇಲ್ಲದಿದ್ದರೆ ನಿಮ್ಮ ಭೂ ಸುಧಾರಣಾ ಕಾಯಿದೆಯನ್ನು ಕೆಲವು ಹಾಕಬೇಕು. ನಮ್ಮ ತಾಲ್ಲೂಕಿನಲ್ಲಿ ಇನ್ನೂ ಭೂ ನ್ಯಾಯ ಮಂಡಲಿಗಳನ್ನು ಇನ್ನೂ ರಚನೆ ಮಾಡಿಲ್ಲ. ಭೂನ್ಯಾಯ ಮಂಡಲಿಯಿಂದ ಮುಂದೆ ಅಪೀಲು ಹೋಗಬೇಕಾದರೆ ಹೈಕೋರ್ಟಿಗೆ ಹೋಗಬೇಕಾಗುತ್ತದೆ. ಅವರು ಏನು ಮಾಡುತ್ತಾರೆಂದರೆ, ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೆ ಪುನಃ ತಾಲೂಕು ಭೂನ್ಯಾಯ ಮಂಡಲಿಗಳಿಗೆ ರಿವಿಷನ್‌ಗೋಸ್ಕರ ವಾಪಸು ಕಳುಹಿಸಿಕೊಡುತ್ತಾರೆ. ಆದೇ ಈ ಅಪ್ಪಿಲೆಟ್ ಟ್ರಿಬ್ಯುನಲ್‌ನವರು ಏನು ಮಾಡುತ್ತಿದ್ದಾರೆಂದರೆ ಮತ್ತೆ ಆ ಭೂಮಿಯನ್ನು ದಣಿಗೇ ವಾಪಸ್ಸು ಕೊಡುತ್ತಾರೆ.

1-00 P. M.

ಮಾನ್ಯ ಅಧ್ಯಕ್ಷರೇ, ಹಿಂದೆ ವಿರೋಧ ಪಕ್ಷದವರು ಅಧಿಕಾರದಲ್ಲಿರಬೇಕಾದರೆ ರಿಟೈರಲ್ಲಿ ಈ ಅಪಿಲೆ ಟ್ರಿಬ್ಯುನಲ್‌ಗಳನ್ನು ಜಾರಿಗೆ ತಂದರು. ಇವರು ಗೇಣಿದಾರರ ಪರವಾಗಿ ಇದ್ದೇವೆಂದು ಹೇಳಿದರು. ಇವರು ಗೇಣಿದಾರರಿಗೆ ಕಾಂಪೆನ್‌ಸೇಷನ್ ರದ್ದು ಮಾಡಿದ್ದೇವೆಂದು ಹೇಳಿದರು. ಆದರೆ ಪರೋಕ್ಷವಾಗಿ ನಯಪಂಚನೆ ಮಾಡಿ ಗೇಣಿದಾರರನ್ನು ಬೀದಿಪಾಲುಮಾಡುತ್ತಿದ್ದಾರೆ ಇವರು ಇಲ್ಲಿ ಪುನಃ ಇದನ್ನು ಸಮರ್ಥನೆ ಮಾಡಿದರೆ ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಕೂಡಲೆ ಇದನ್ನು ರದ್ದು ಪಡಿಸಬೇಕು. ನಮ್ಮಲ್ಲಿ ಗೇಣಿದಾರರು ನಾಲ್ಕೂವರ್ಷದಿಂದ ಬೀದಿಪಾಲಾಗಿದ್ದಾರೆ. ಅದಕ್ಕೆ ಏನು ಮಾಡುತ್ತೀರಾ ? ಅದಕ್ಕಾಗಿ ವಿತ್‌ಡ್ರಾ ಮಾಡಿ. ವಿತ್‌ಡ್ರಾ ಮಾಡಿದರೆ ಅದರ ಕಾರ್ಯ ನಿಂತಂಹೋಗುತ್ತದೆ. ನಂತರ ಈ ಬಗ್ಗೆ ಯೋಚನೆ ಮಾಡಿ.

ಶ್ರೀ ಅಜೀಜ್ ಸೇಟ್.—ನಾನು ಮೊದಲೇ ಈ ಬಗ್ಗೆ ಹೇಳಿದೆ. My reply to the call attention notice is based on facts. ಆದರೆ ಇದ್ದುದನ್ನು ಹೇಳಬೇಕಲ್ಲವೇ ? ಇದ್ದುದನ್ನು ಹೇಳಿದೆ, ತೊಂದರ ಹೀಗಿದೆ ಎಂದು ಹೇಳಿದೆ. ಈಗ ಮಾನ್ಯ ಸದಸ್ಯರು ಸಹ ಹೇಳಿದ್ದಾರೆ. ಅದಕ್ಕೆ ನಾನು ಉತ್ತರ ಹೇಳಿದ್ದೇನೆ. ಅಪಿಲೆಟ್ ಟ್ರಿಬ್ಯುನಲ್ ವಜಾ ಮಾಡಿ ಹೈಕೋರ್ಟಿಗೆ ಅಧಿಕಾರ ಕೊಟ್ಟರೆ ಪರಿಸ್ಥಿತಿ ಏನಾಗುತ್ತದೆ ಎಂಬ ಬಗ್ಗೆ Pros and cons ಎಲ್ಲಾ ನೋಡಿ ರೈತರಿಗೆ ಅನುಕೂಲವಾಗುವಂತೆ ನೋಡಿ ಮಾಡಬೇಕಾಗುತ್ತದೆ. ಇವುಗಳನ್ನು ಸಸ್‌ಪೆಂಡ್ ಮಾಡಬೇಕೋ ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. The entire Cabinet including the Chief Minister is not happy with the working of tribunals. I also agree but there should be some time in taking decision.

(Interruption)

ಅಧ್ಯಕ್ಷರು.—ನಾನು ಗಂಗಾಧರ ಗೌಡರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಾರೆ.

ಶ್ರೀ ಕೆ. ಗಂಗಾಧರ ಗೌಡ.—ಗೇಣಿದಾರರಿಗೆ ಒಳ್ಳೆಯದು ಸ್ಪಷ್ಟವಾಗಿದೆ. ಆದ್ದರಿಂದ ಮಾನ್ಯ ಸಚಿವರು ಕೂಡಲೆ ಕ್ರಮ ತೆಗೆದುಕೊಳ್ಳಬೇಕು. ನಿಮಗೆ ಆರು ತಿಂಗಳು ಅವಕಾಶವಿತ್ತಲ್ಲ, ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ನಾವು ಜನರಿಗೆ ಏನು ಉತ್ತರ ಕೊಡುವುದು.

ಶ್ರೀ ಅಜೀಜ್ ಸೇಟ್.—ಉಸಿರು ಬಿಟ್ಟ ತಕ್ಷಣ ಮಾಡಬೇಕೆಂದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. It takes time.

(ಗೊಂದಲ)

ಅಧ್ಯಕ್ಷರು.—ಈಗ ಸಿಪಿಐರ ಮೇಲಿನ ಜರ್ಜ್, ಶ್ರೀ ಕೆ. ಹೆಚ್. ಹನುಮೇಗೌಡ್ರು

(ಗೊಂದಲ)

ಶ್ರೀ ರಮಾನಾಥರೈ.—ಮಾನ್ಯ ಅಧ್ಯಕ್ಷರೇ, ಈ ಅಪಿಲೆಟ್ ಟ್ರಿಬ್ಯುನಲ್ ಅನ್ನು ತಕ್ಷಣವೇ ರದ್ದು ಪಡಿಸಬೇಕು ಇಲ್ಲವೇ ಸಸ್‌ಪೆಂಡ್ ಮಾಡಬೇಕು. ಭೂಪಾಲೀಕರ ಪರವಾಗಿ ಅನುಕೂಲವಾಗಿ ಬೇಕೆಂದು ಹಿಂದಿನ ಜನತಾ ಸರ್ಕಾರ ಏನು ಇದನ್ನು ಮಾಡಿತ್ತು, ಅದು ಜುರಿಡಿಕ್ಷಿಯರಿಯಲ್ಲಿ ಬರುವುದಿಲ್ಲ. ಅಲ್ಲಿ ವಕೀಲರು ಭಾಗವಹಿಸಬೇಕು, ಅಲ್ಲಿ.....

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಸಂಬಂಧ ಪಟ್ಟ ಮಂತ್ರಿಗಳೇ ಇಲ್ಲ.

ಶ್ರೀ ಪಾಟಾಳ್ ನಾಗರಾಜ್.—ಸಂಬಂಧಪಟ್ಟ ಮಂತ್ರಿಗಳು ಹೇಳದೆ ಕೇಳದೇ ಓಡಿಹೋಗಿಬಿಟ್ಟಿದ್ದಾರೆ. ಅವರನ್ನು ದಯವಿಟ್ಟು ಅಧ್ಯಕ್ಷರು ಕರೆಸಬೇಕು.

(ಗೊಂದಲ)

ಅಧ್ಯಕ್ಷರು.—ಇದು ಬಹಳ ಮಾನ್ಯ ಮಂತ್ರಿಗಳ ಮೇಲೆ these are unfair remarks. ನಾನು ಗಮನ ಸೆಳೆಯುವ ಸೂಚನೆ ಮಾಡಿಯಿತು. ಸಿಪಿಐರ ವಿಷಯ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಕ್ಕೆ ಅವರು ಎದ್ದು ಹೋದರು. ಆದ್ದರಿಂದ ಮಂತ್ರಿಗಳು ವಾಕ್‌ಔಟ್ ಮಾಡಿದರು ಮತ್ತೊಂದು ಮಾಡಿದರು ಶೇಮ್, ಶೇಮ್ ಎಂದೆಲ್ಲಾ ಹೇಳುವುದು ಸರಿಯಲ್ಲ.

ಶ್ರೀ ಕೆ. ಗಂಗಾಧರಗೌಡ.—ಮಾನ್ಯ ಅಧ್ಯಕ್ಷರೆ ಗಮನ ಸೆಳೆಯುವ ಸೂಚನೆಯನ್ನು ತಂದವರು ನಾವು.

ಅಧ್ಯಕ್ಷರು —ನೀವು ಈ ಸದನದ ಒಬ್ಬ ಹಿರಿಯ ಸದಸ್ಯರು. ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ಕ್ವಾರಿಫಿಕೇಷನ್ ಪಡೆಯುವುದಕ್ಕೆ ನಿಮಗೆ ಅವಕಾಶ ಕೊಟ್ಟೆ. ಆದ್ದರಿಂದ ನೀವು ಹೇಳಿದಂತೆಯೇ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದೇನೂ ನಿಯಮದಲ್ಲಿ ಇಲ್ಲ ನಿಮ್ಮಲ್ಲಿ ಏನಾದರು ತೊಂದರೆಗಳು ಇದ್ದರೆ. There are so many other forums in which you can bring the same question on the floor of the House.

ಶ್ರೀ ಕೆ ಗಂಗಾಧರಗೌಡ —ಇದು ನಿಯಮದ ಪ್ರಶ್ನೆ ಅಲ್ಲ. ಮಾನವೀಯತೆಯ ಪ್ರಶ್ನೆ. ಅಲ್ಲಿ ಎಷ್ಟೋ ಜನರೈತರು ಬಿದಿ ಪಾಲು ಆಗುತ್ತಿದ್ದಾರೆ.

ಅಧ್ಯಕ್ಷರು.—ಈಗ ನಾನು ಹನುಮೇಗೌಡರನ್ನು ಕರೆದಿದ್ದೇನೆ.

(ನಿಯಮ ೩೩ಳ ಮೇರೆಗೆ)

ಹಾಸನ ಜಿಲ್ಲೆಯಲ್ಲಿ ಮುಂಗಾರು ಬೆಳಗೆ ಬೇಕಾಗಿರುವ ರಾಸಾಯನಿಕ ಗೊಬ್ಬರವನ್ನು ದಾಸ್ತಾನು ಮಾಡುವುದು

ಶ್ರೀ ಎ. ಹೆಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ ರಾಸಾಯನಿಕ ಗೊಬ್ಬರಗಳ ಅಭಾವವಿದೆ. ಮುಂಗಾರು ಮಳೆ ಬಿದ್ದ ತಕ್ಷಣ ಈ ಜಿಲ್ಲೆಯಲ್ಲಿ ಬೆಳೆಯುವ ಆಲೂಗಡ್ಡೆ, ಜೋಳ, ರಾಗಿ ಮುಂತಾದ ಬೆಳೆಗಳಿಗೆ ಹಾಕಲು ಹತ್ತಾರು ಸಾವಿರ ಟನ್ ರಾಸಾಯನಿಕ ಗೊಬ್ಬರದ ಅವಶ್ಯಕತೆ ಇದೆ. ಕಳೆದ ವರ್ಷ ಈ ದಿನಗಳಲ್ಲಿ ಹಾಸನ ಜಿಲ್ಲೆಯಲ್ಲಿ ಸುಮಾರು ೧೫ ರಿಂದ ೨೦ ಸಾವಿರ ಟನ್ ರಾಸಾಯನಿಕ ಗೊಬ್ಬರದ ದಾಸ್ತಾನಿತ್ತು. ಈ ವರ್ಷ ಈಗ ಕೇವಲ ೮೦೦ ಟನ್ ರಾಸಾಯನಿಕ ಗೊಬ್ಬರ ದಾಸ್ತಾನಿರುವುದಾಗಿ ತಿಳಿಯಿತು. ಈ ಜಿಲ್ಲೆಗೆ ಮುಂಗಾರು ಬೆಳೆಗೆ ಬೇಕಾಗುವ ರಾಸಾಯನಿಕ ಗೊಬ್ಬರವನ್ನು ದಾಸ್ತಾನು ಮಾಡಲು ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ವ್ಯವಸಾಯ ಸಚಿವರ ಗಮನ ಸೆಳೆಯಲಾಗಿದೆ.

ಶ್ರೀ ಕೆ. ಜೆ. ಜಾರ್ಜ್.—ವ್ಯವಸಾಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಮಾನ್ಯ ಸದಸ್ಯರಿಗೆ ಉತ್ತರ ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

೨) ಚರ್ಚ್ ಆಫ್ ಸೌತ್ ಇಂಡಿಯಾ ಹಾಸ್ಪಿಟಲ್, ಗದಗ್ ಇಲ್ಲಿ ಹೆಚ್‌ಡಬ್ಲ್ಯೂಟಿ ಕೋರ್ಸನ್ನು ಮುಂದುವರಿಸುವ ಪರವಾನಿಗೆ ನೀಡುವ ಬಗ್ಗೆ

K. H. PATIL.—I call the attention of the Hon. Minister for Health and cooperation regarding the long pending representation to grant permission as recommended by the Director of Health and Family welfare to continue HWT course to the church of South India Hospital under MCH 80 f 90 dated 17-1-90, is pending with the Government causing inconvenience to the public at Gadag.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ಚರ್ಚ್ ಆಫ್ ಸೌತ್ ಇಂಡಿಯಾ ಹಾಸ್ಪಿಟಲ್, ಗದಗ್, ಈ ಸಂಸ್ಥೆಯು ೨೦ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ತರಬೇತಿ ಕೊಡಲು ಅನುಮತಿಯ ಪ್ರಸ್ತಾವನೆಯನ್ನು ದಿನಾಂಕ ೧೭-೧-೯೦ ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ ಇವರು ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರಿಗೆ ಸಲ್ಲಿಸಿದ್ದರು. ಈ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದಿಲ್ಲ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ ೨೨-೩-೯೦ ರಂದು ತರಬೇತಿಯನ್ನು ಮುಂದುವರೆಸಲು ಆದೇಶವನ್ನು ಹೊರಡಿಸಿದ್ದಾರೆ.